4) ಸುಣ್ಣಕಟ್ಟು ರೋಗ ಮತ್ತು ಊಜಿ ಹಾವಳಿ ನಿಯಂತ್ರಿಸಲು ರೇಷ್ಮೆ ಬೆಳೆಗಾರರಿಗೆ ಕರಪತ್ರಗಳು: ತರಬೇತಿ ಶಿಬಿರಗಳು ಮತ್ತು ತಾಂತ್ರಿಕ ಸೇವಾ ಕೇಂದ್ರಗಳ ಅಧಿಕಾರಿಗಳ ಮೂಲಕ ತಿಳುವಳಿಕೆ ನೀಡಲಾಗಿದೆ.

5) ಸೋಕು ನಿವಾರಕಗಳನ್ನು ಇಲಾಖಾವತಿಯಿಂದ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ರೈತರಿಗೆ ಸರಬರಾಜು ಮಾಡಿ ರೋಗ ನಿಯಂತ್ರಣ ಕ್ರಮಗಳನ್ನು ಪಾಲಿಸಲಾಗುತ್ತಿದೆ.

ಪ್ರಸುತ್ತ ರೋಗಗಳು ಪರಿಣಾಮಕಾರಿಯಾಗಿ ಹತೋಟಿಗೆ ಬಂದಿದೆ.

ಬಯಲು ಸೀಮೆ ಪ್ರದೇಶಾಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳ ಅಭಿವೃದ್ಧಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 356(844)

ಸದಸ್ಯರ ಹೆಸರು : ಶ್ರೀ ಬಚ್ಚೇಗೌಡ ಬಿ.ಎನ್.(ಹೊಸಕೋಟೆ)

ಉತ್ತರಿಸುವ ಸಚಿವರು : ಶ್ರೀ ಬಿ.ರಮಾನಾಥರೈ (ಮೀನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು)

ಪ್ರಶ್ನೆ

ಅ) 2001-2002ನೇ ಸಾಲಿನಲ್ಲಿ ಬಯಲು ಸೀಮೆ ಪ್ರದೇಶಾಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳನ್ನು ಅಭಿವೃದ್ಧಿಪಡಿಸಲು ಎಷ್ಟು ಹಣ ಬಿಡುಗಡೆ ಮಾಡಿದೆ?

ಆ) ನಿಗಮ ಅಭಿವೃದ್ಧಿಪಡಿಸಲು ನಬಾರ್ಡ್‌ನಿಂದ ಹಣವನ್ನು ಸಾಲ ಪಡೆಯಲಾಗಿದೆಯೇ?

ಇ) ಇದುವರೆವಿಗೂ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಮಂಜೂರಾಗಿದೆ?

ಈ) ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? ವಿವರ ನೀಡುವುದು, ಇದಕ್ಕೆ ಮಂಜೂರು ಮಾಡಲಾಗದ ಪ್ರತಿಕಾಮಗಾರಿಯ ಹಣವೆಷ್ಟು? (ವಿವರ ನೀಡುವುದು)

ಉತ್ತರ

ಅ) ರೂ.190.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಪಶು ಔಷಧಿಗಳ ಕೊರತೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 357(845)

ಸದಸ್ಯರ ಹೆಸರು : ಶ್ರೀ ಬಿ.ಎನ್.ಬಚ್ಚೇಗೌಡ (ಹೊಸಕೋಟೆ)

ಉತ್ತರಿಸುವ ಸಚಿವರು : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಪಶು ಔಷಧಿಗಳ ಕೊರತೆಯಿಂದಾಗಿ ಜಾನುವಾರುಗಳು, ಮೇಕೆಗಳು ಮತ್ತು ಕುರಿಗಳು (ನೀಲಿ ನಾಲಿಗೆ) ರೋಗಗಳಿಂದ ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ತೆಗೆದುಕೊಂಡಿರುವ ಕ್ರಮಗಳೇನು?

ಇ) 2001-2002ನೇ ಸಾಲಿನಲ್ಲಿ ಎಷ್ಟು ಪಶು ಔಷಧಿಯನ್ನು ಖರೀದಿಸಲಾಗಿದೆ? ಎಷ್ಟು ಹಣ ಖರ್ಚು ಮಾಡಲಾಗಿದೆ?

ಈ) ಔಷಧಿ ಕೊರತೆಯನ್ನು ನೀಗಿಸಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)

ಉ) ಇಲಾಖೆಯಲ್ಲಿ ಕೊರತೆ ಇರುವ ವಿವಿಧ ಸಿಬ್ಬಂದಿ ನೀಡುವುದು?

ಊ) ನೇಮಕಾತಿಗಾಗಿ ಕ್ರಮ ತೆಗೆದುಕೊಳ್ಳಲಾಗಿದೆಯೇ? (ವಿವರ ನೀಡುವುದು)